


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೫

ಶ್ರೀರಾಮಕೃಷ್ಣರ ಭವಿಷ್ಯವಾಣಿಯು ಸತ್ಯವೆಂದು ಸ್ವಾಮಿ ವಿವೇಕಾನಂದರು ತಿಳಿದುಕೊಂಡಿದ್ದರು. ವಿವೇಕಾನಂದರ ಭವಿಷ್ಯವಾಣಿಗಳು ಒಂದೊಂದಾಗಿ ವಾಸ್ತವವಾಗುತ್ತಿದ್ದುದನ್ನು ಕಂಡು ಅವರ ಗುರುಭಾಯಿಗಳು ರೋಮಾಂಚಿತರಾಗುತ್ತಿದ್ದರು. ಈ ಗುರುಭಾಯಿಗಳು ಭವಿಷ್ಯತ್ತಿನ ಬಗ್ಗೆ ಕೊಟ್ಟ ಸೂಚನೆಯನ್ನು ಅವರ ನಂತರದವರು ಮಾನ್ಯ ಮಾಡದೆ ಇರಲು ಸಾಧ್ಯವಾಗುತ್ತಿರಲಿಲ್ಲ. ಈ ಭವಿಷ್ಯವಾಣಿಯು ಸತ್ಯವಾಗುತ್ತಿರುವುದನ್ನು ಸ್ವಾಮಿ ಅನಂತಾನಂದರು ಭಾರತದಲ್ಲಿ ಹೋದೆಲ್ಲೆಡೆ ವೀಕ್ಷಿಸುತ್ತಿದ್ದರು. ದಕ್ಷಿಣ ಭಾರತೀಯರಲ್ಲಿ ಶ್ರೀರಾಮಕೃಷ್ಣರ ಭಾವಾದರ್ಶ ಪ್ರಚಾರವಾಗುತ್ತಿದ್ದುದನ್ನು ಕಣ್ಣಾರೆ ಕಂಡಿದ್ದ ಇವರು, ಈಗ ಪಶ್ಚಿಮ ಭಾರತದಲ್ಲೂ ಅದನ್ನು ವೀಕ್ಷಿಸಲು ಬಂದಿದ್ದಾರೆ.

ಉದಕಮಂಡಲ ಮತ್ತು ನಾಗಪುರ ಆಶ್ರಮದಂತೆ ಮುಂಬೈ ಆಶ್ರಮದ ಈಗಿನ ಕಟ್ಟಡಕ್ಕೆ ಅಸ್ತಿಭಾರವನ್ನು ಪೂಜ್ಯರಾದ ಮಹಾಪುರುಷ ಮಹಾರಾಜರೇ ನೆರವೇರಿಸಿದ್ದರು. ೧೯೨೫ರ ಜನವರಿಯಲ್ಲಿ ಶಿವಾನಂದರು ಭೇಟಿಯಿತ್ತಾಗ, ಆಶ್ರಮವು ಬಾಡಿಗೆ ಮನೆಯೊಂದರಲ್ಲಿತ್ತು. ಅವರು ಅಲ್ಲಿರುವಾಗಲೇ ಆಶ್ರಮಕ್ಕಾಗಿ ಭೂಮಿಯನ್ನು ಕೊಂಡುಕೊಳ್ಳಲಾಯಿತು. ಅಲ್ಲದೆ, ಕಟ್ಟಡದ ಅಸ್ತಿಭಾರವನ್ನು ಸಹ ಇವರೇ ಹಾಕಿದ್ದರು. ೧೯೨೬ರ ಡಿಸೆಂಬರ್‌ನಲ್ಲಿ ಶಿವಾನಂದರು ಮತ್ತೆ ಮುಂಬೈಗೆ ಬಂದು ಹೊಸದಾಗಿ ಕಟ್ಟಲಾಗಿದ್ದ ದೇವರಮನೆಯಲ್ಲಿ ಶ್ರೀರಾಮಕೃಷ್ಣರ ಛಾಯಾಚಿತ್ರವನ್ನು ಪ್ರತಿಷ್ಠಾಪಿಸಿದರು. ಆ ಬಾರಿ ಎರಡು ತಿಂಗಳ ಕಾಲ ಶಿವಾನಂದರು ಮುಂಬೈಯಲ್ಲಿದ್ದರು. ಈ ಸಮಯದಲ್ಲಿ ಅವರು ಅಲ್ಲಿಂದ ಬರೆದ ಪತ್ರವೊಂದರಲ್ಲಿ ಇಂತಿದೆ:

''ಮುಂಬೈಯಲ್ಲಿ ಠಾಕೂರ್-ಸ್ವಾಮೀಜಿಯವರ ವಿಚಾರಧಾರೆಯು ದೇವರ ಇಚ್ಛೆಯಿಂದ ಚೆನ್ನಾಗಿ ಪ್ರಚಾರವಾಗುತ್ತಿದೆ, ಇಲ್ಲಿನ ಸುಶಿಕ್ಷಿತ ಸಮಾಜವು ಬಹಳ ಉತ್ಕಂಠಿತವಾಗಿದೆ. ಇದೊಂದು ಶುಭಲಕ್ಷಣ... ಜಯ್ ಠಾಕೂರ್, ಧನ್ಯ ಠಾಕೂರ್ ಎಲ್ಲವೂ ನಿನ್ನ ಮಹಿಮೆಯೇ. ಇವೆಲ್ಲವೂ ಯುಗಧರ್ಮ ಸ್ಥಾಪನೆಯ ಲಕ್ಷಣ. ಈ ರೀತಿ ಇನ್ನೂ ಎಷ್ಟೆಷ್ಟಾಗಲಿದೆಯೋ ಏನೋ, ಎಲ್ಲೆ ಇದೆಯೆ!''

ಮಹಾಪುರುಷರ ನಂತರ ಅಧ್ಯಕ್ಷರಾದ ಸ್ವಾಮಿ ಅಖಂಡಾನಂದರೂ ೧೯೩೪ರ ಅಕ್ಟೋಬರ್‌ನಲ್ಲಿ ಮುಂಬೈಗೆ ಹೋಗಿದ್ದರು. ಮಹಾಪುರುಷರ ಪತ್ರದಲ್ಲಿ ಉಲ್ಲೇಖಿತವಾದ ಆ 'ಶುಭಲಕ್ಷಣ'ವನ್ನು ಇವರೂ ಸಹ ಮನಗಂಡಿದ್ದರು. ಅಲ್ಲದೆ ಅಲ್ಲಿ ಒಂದು ತಿಂಗಳ ಕಾಲ ತಂಗಿದ್ದು, ಅದನ್ನು ಮತ್ತೂ ದೃಢಗೊಳಿಸಿದ್ದರು. ಇಂದು ಐದು ವರ್ಷಗಳ ನಂತರ ಬಂದ ಆರನೇ ಅಧ್ಯಕ್ಷರಾದ ವಿರಜಾನಂದರು ಮುಂಬೈನಲ್ಲಿ ರಾಮಕೃಷ್ಣರ ಮಹಿಮೆಯು ಇನ್ನೂ ಹೆಚ್ಚು ವ್ಯಾಪಕವಾಗಿ ಹರಡಿರುವುದನ್ನು ಕಾಣುವುದು ಸ್ವಾಭಾವಿಕವೇ. ಮರಾಠಿಗರು, ಗುಜರಾತಿಗಳು, ಪಾರ್ಸಿಗಳು, ಬಂಗಾಳಿಗಳು ಎಲ್ಲರೂ ಈ ಆಶ್ರಮವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಇವರೆಲ್ಲರ ಮಕ್ಕಳು ದಿನವೂ ಸಂಜೆಯ ವೇಳೆ ಬಹಳ ಉತ್ಸಾಹದಿಂದ ಆಶ್ರಮದಲ್ಲಿ ನೆರೆದು, ಮಂದಿರದ ಪ್ರಶಸ್ತವಾದ ಅಂಗಣದಲ್ಲಿ ಕುಳಿತು ಏಕಕಂಠದಲ್ಲಿ ಆರತಿಯ ಹಾಡುಗಳನ್ನು ಹಾಡುತ್ತಾರೆ. ನಂತರ ಒಂದೆರಡು ಭಜನೆಯನ್ನು ಒಂದು ದಿನ ಮರಾಠಿ, ಮತ್ತೊಂದು ದಿನ ಗುಜರಾತಿ, ಮಗದೊಂದು ದಿನ ಹಿಂದೀ ಅಥವಾ ಬಂಗಾಳಿ — ಹೀಗೆ ವಿವಿಧ ಭಾಷೆಗಳಲ್ಲಿ ಹಾಡುತ್ತಾರೆ.

ವಿರಜಾನಂದರು ಪ್ರತಿದಿನ ಸಂಧ್ಯಾರತಿಯ ನಂತರ ಜನಸಾಮಾನ್ಯರೊಂದಿಗೆ ಭೇಟಿ ಮಾಡಲು ಕೆಳಗಿನ ಹಜಾರದಲ್ಲಿ ಕುಳಿತುಕೊಳ್ಳುತ್ತಿದ್ದರು. ಕೆಲವೊಂದು ದಿನ ಪ್ರಶ್ನೋತ್ತರಗಳೂ ನಡೆಯುತ್ತಿದ್ದವು. ಶ್ರೀಮಾನ್ ಬಿಲಿಮೋರಿಯಾ ಎಂಬ ಪಾರ್ಸಿ ವೃದ್ಧರು ಬಾಂಬೆ ಆಶ್ರಮದ ಬಹುಕಾಲದ ಹಿತೈಷಿಗಳು. ಇವರು ಸ್ವಾಮಿ ವಿವೇಕಾನಂದರನ್ನು ೧೮೯೭ರಲ್ಲಿ ಲಾಹೋರ್‌ನಲ್ಲಿ ಕಂಡಿದ್ದರು ಹಾಗೂ ಅವರೆಡೆಗೆ ಬಹಳ ಆಕರ್ಷಿಸಲ್ಪಟ್ಟಿದ್ದರು. ಸ್ವಾಮೀಜಿಯವರ ಕೃತಿಶ್ರೇಣಿಯನ್ನು ಓದುವುದು ಅವರ ದಿನಚರಿಯಾಗಿತ್ತು. ಸಾಮಾನ್ಯವಾಗಿ ಆರತಿಯ ಸಮಯದಲ್ಲಿ ಆಶ್ರಮಕ್ಕೆ ಬರುತ್ತಿದ್ದರು. ಮೇಲ್ಮಂದಿರದಲ್ಲಿ ಆರಾತ್ರಿಕವು ನಡೆಯುವಾಗ ಈ ವೃದ್ಧರು ಕೆಳಗೆ ಒಂದು ಕುರ್ಚಿಯಲ್ಲಿ ಕಣ್ಣುಮುಚ್ಚಿ ಸ್ಥಿರವಾಗಿ ಕುಳಿತಿರುತ್ತಿದ್ದರು. ಒಂದು ದಿನ ಈ ಬಿಲಿಮೋರಿಯಾ ವಿರಜಾನಂದರನ್ನು ಹೀಗೆಂದು ಪ್ರಶ್ನಿಸಿದರು, ''ಈಗ ಹೇಳಿ, ನನಗ್ಯಾವಾಗ ಭಗವದ್ದರ್ಶನವಾಗುತ್ತದೆ?'' ಎಂದು. ಆ ಹಜಾರವೋ ಜನರಿಂದ ತುಂಬಿತ್ತು. ವಿರಜಾನಂದರು ಈ ರೀತಿಯ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಸಾವರಿಸಿಕೊಂಡು ಹೇಳಿದರು, ''ನೀವಂತೂ ಭಗವಂತನ ಭಕ್ತರು. ಖಂಡಿತವಾಗಿ ಕೊನೆಗಾಲದಲ್ಲಿ ನಿಮಗವನು ದರ್ಶನ ನೀಡುವನು.''

‘‘ಸರಿಯಾಗಿ ಹೇಳುತ್ತಿರುವಿರಷ್ಟೆ?’’

‘‘ಹೌದು.’’

ವೃದ್ಧರ ಮುಖದಲ್ಲಿ ಭರವಸೆಯು ಮೂಡಿತ್ತು.[೧]

ಉದಯಶಂಕರರು ಈಗ ಮುಂಬೈಗೆ ಬಂದಿದ್ದಾರೆ. ಮೊದಲೊಮ್ಮೆ ಇವರು ವಿರಜಾನಂದರನ್ನು ಆಲ್ಮೋರದಲ್ಲಿ ಭೇಟಿಯಾಗಿದ್ದರು. ಅವರು ತಮ್ಮ ನೃತ್ಯ ಪ್ರದರ್ಶನಕ್ಕೆ ಮಹಾರಾಜರನ್ನು ತುಂಬ ಒತ್ತಾಯ ಮಾಡಿ ಕರೆದರು. ಆಶ್ರಮಾಧ್ಯಕ್ಷರಾದ ಸ್ವಾಮಿ ಸಂಬುದ್ಧಾನಂದರೊಡಗೂಡಿ ವಿರಜಾನಂದರು ಅವರ ನೃತ್ಯ ಪ್ರದರ್ಶನವನ್ನು ನೋಡಿ ಬಂದರು. ಆನಂದದಿಂದ ಆ ಕಲಾವಿದನಿಗೆ ತಮ್ಮ ತುಂಬು ಹೃದಯದ ಆಶೀರ್ವಾದವನ್ನಿತ್ತರು.

೨೫ನೇ ನವೆಂಬರ್ ೧೯೩೮ರಂದು ಸ್ವಾಮಿ ವಿಜ್ಞಾನಾನಂದರ ಜನ್ಮದಿನ. ಮುಂಬೈ ಆಶ್ರಮದಲ್ಲಿ ಭಕ್ತರ ಕೋರಿಕೆಯ ಮೇರೆಗೆ ವಿರಜಾನಂದರು ಬ್ರಹ್ಮಜ್ಞರಾದ ಸ್ವಾಮಿ ವಿಜ್ಞಾನಾನಂದರ ಬಗ್ಗೆ ಮಾತನಾಡಿ ತಮ್ಮ ಸವಿನೆನಪುಗಳನ್ನು ಹಂಚಿಕೊಂಡರು. ಹೀಗೆಯೇ ಮತ್ತೊಂದು ದಿನ ಸ್ವಾಮಿ ಅದ್ಭುತಾನಂದರ ಬಗ್ಗೆ ಕೂಡ ಮಾತನಾಡಿದರು.

೧೯೩೮ರ ನವೆಂಬರ್ ೨೮ರಂದು ಮುಂಬೈನ ಕಾಜೀ ಜಹಾಂಗೀರ್ ಹಾಲ್‌ನಲ್ಲಿ ರಾಮಕೃಷ್ಣ ಸಂಘದ ಅಧ್ಯಕ್ಷರಾದ ಸ್ವಾಮಿ ವಿರಜಾನಂದರಿಗೆ ಸಾರ್ವಜನಿಕರು ಸ್ವಾಗತವನ್ನು ಕೋರಿದರು. ಮುಂಬೈನ ಮೇಯರ್ ಅಭಿನಂದನಾ ಪತ್ರವನ್ನು ಓದಿದರು. ಶ್ರೀ ಬಿ. ಜಿ. ಖೇರ್ ಎಂಬುವರು ಮಾನ್ಯ ಸಂನ್ಯಾಸಿಗಳು ಮುಂಬೈಗೆ ಪಾದಾರ್ಪಣೆ ಮಾಡಿದುದಕ್ಕಾಗಿ ಆನಂದವನ್ನು ಪ್ರಕಾಶಪಡಿಸಿ, ಒಂದು ಚಿಕ್ಕ ಭಾಷಣ ನೀಡಿ ತಮ್ಮ ಶ್ರದ್ಧೆಯನ್ನು ಸಲ್ಲಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಮಹಾರಾಜರು ಅರ್ಧ ಗಂಟೆಗಳ ಕಾಲ ಭಾಷಣವನ್ನು ಓದಿದರು. ಈ ಸಭೆಗೆ ಜನರು ಕಿಕ್ಕಿರಿದು ನೆರೆದಿದ್ದರು. ಮಠಾಧ್ಯಕ್ಷರ ಶಾಂತಮೂರ್ತಿ, ಹಾಗೂ ಅವರ ಮಧುರ ಕಂಠದಿಂದ ಹೊಮ್ಮಿದ ಭಾಷಣವು ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತ್ತು. ಭಾಷಣದ ಕೆಲವು ತುಣುಕುಗಳು:

[೧] ಇದಾದ ನಂತರ ಶ್ರೀಮಾನ್ ಬಿಲಿಮೋರಿಯಾ ನಾಲ್ಕು ತಿಂಗಳ ಕಾಲ ಮಾತ್ರ ಬದುಕಿದ್ದು, ೧೯೪೦ರ ಮಾರ್ಚ್ ೧೨ರಂದು ದೇಹವನ್ನು ತ್ಯಜಿಸಿದರು. ವಿರಜಾನಂದರು ಆಗ ಬೇಲೂರು ಮಠದಲ್ಲಿದ್ದರು. ಅಲ್ಲಿಗೇ ಮಠ ಮತ್ತು ಮಿಷನ್ನಿನ ಸ್ನೇಹಿತರಾದ ಬಿಲಿಮೋರಿಯಾರ ಮೃತ್ಯು ವಾರ್ತೆಯು ತಂತಿಯ ಮೂಲಕ ತಲುಪಿತು. ವಿರಜಾನಂದರು ಆಗ ಬಿಲಿಮೋರಿಯಾರ ಪತ್ನಿಗೆ ಪತ್ರ ಬರೆದು ತಮ್ಮ ಸಹಾನುಭೂತಿ ವ್ಯಕ್ತಪಡಿಸಿದ್ದರು... ಮರಣದ ಎರಡು ದಿನ ಹಿಂದೆಯೂ ಸಹ ಈ ವೃದ್ಧರು ಆಶ್ರಮಕ್ಕೆ ಬಂದಿದ್ದರು. ಅವರು ಹೇಳುತ್ತಿದ್ದರು, ‘‘ಭಗವಂತನ ಚಿಂತನೆಯೇ ನನ್ನ ಜೀವನದ ಏಕಮಾತ್ರ ಆನಂದ’’ ಎಂದು. ರಾಮಕೃಷ್ಣ ಮಿಷನ್, ಪಾರ್ಸಿ ಪಂಚಾಯತ್, ರೆಡ್ ಕ್ರಾಸ್ ಸೊಸೈಟಿ, ಸಾಲ್ವೇಷನ್... ಮುಂತಾದ ಜನಹಿತ ಸಂಸ್ಥೆಗಳಿಗೆ ಶ್ರೀ ಬಿಲಿಮೋರಿಯಾರವರು ಅಪಾರ ಧನಸಹಾಯವನ್ನು ನೀಡುತ್ತಿದ್ದರು.

‘‘ಮಾನ್ಯ ಸಭಾಪತಿಗಳೇ, ಮಹಿಳೆಯರೇ ಮತ್ತು ಮಹನೀಯರೆ,

ನೀವೆಲ್ಲರೂ ನನಗೆ ಕೋರುತ್ತಿರುವ ಅತ್ಯಂತ ಆದರದ ಸ್ವಾಗತವನ್ನು ಸ್ವೀಕರಿಸುವ ಸಂದರ್ಭದಲ್ಲಿ ಇಲ್ಲಿ ಉಪಸ್ಥಿತನಿರಲು ನನಗೆ ತುಂಬ ಆನಂದವಾಗುತ್ತಿದೆ... ನೀವಿತ್ತ ಈ ಸನ್ಮಾನವು ವೈಯಕ್ತಿಕವಾಗಿರದೆ, ಯಾವ ಸಂಘದಲ್ಲಿ ಇರುವುದರಿಂದ ನನ್ನನ್ನು ನಾನು ಧನ್ಯನೆಂದೆಣಿಸಿರುವೆನೋ ಆ ಸಂಘಕ್ಕೆ ತೋರಿಸಿದ ಸನ್ಮಾನವೇ ಇದು ಎಂಬುದನ್ನು ಚೆನ್ನಾಗಿ ಬಲ್ಲೆ... ಮೊದಲನೆಯದಾಗಿ ಆ ಪವಿತ್ರ ಸಂಘದ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ಹಾಗೂ ಎಲ್ಲ ವರ್ಗದ ಸ್ತ್ರೀ-ಪುರುಷರ ಪ್ರತಿನಿಧಿತ್ವವನ್ನು ಸೂಚಿಸುವ ಈ ಸಭೆಯನ್ನು ನೋಡಿ ನನಗೆ ಪರಮಾನಂದವಾಗಿದೆಯೆಂಬುದನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ರೀತಿಯ ಸಭೆಯು ಭಾರತೀಯರ ಸ್ವಾಭಾವಿಕವಾದ ಉದಾರ ಮನೋಭಾವದ ಲಕ್ಷಣ. ಭಗವಾನ್ ಶ್ರೀರಾಮಕೃಷ್ಣರ ಅನುಭವಗಳು ಈ ಉದಾರ ಮನೋಭಾವದ ಸರ್ವೋಚ್ಚ ಹಾಗೂ ಮಹತ್ತರವಾದ ಮೂರ್ತರೂಪವೇ ಆಗಿದೆ. ಪರಮತ ಸಹಿಷ್ಣುತೆ ಎಂಬ ಯಾವೊಂದು ವಿಶಾಲಗುಣವು ಹಿಂದಿನ ಕಾಲದಿಂದಲೂ ನಮ್ಮ ಮಾತೃಭೂಮಿಯಲ್ಲಿ ಪ್ರಾಣ ಸಂಚಾರವನ್ನು ಮಾಡುತ್ತಿದೆಯೋ ಅದರ ಬಲದಿಂದಲೇ ವಿಭಿನ್ನ ಮತ-ಸಂಪ್ರದಾಯಗಳು ಈ ದೇಶದಲ್ಲಿ ನೆಲೆಯೂರಲು ಸಾಧ್ಯವಾಗಿದೆ. ಪರಮತ ಸಹಿಷ್ಣುತೆ ಎಂಬುದು ನೀತಿವಾಚಕ ಧರ್ಮವಲ್ಲ. ಬೇರೆ ಬೇರೆ ಧರ್ಮ ಹಾಗೂ ಮತಗಳಲ್ಲಿನ ಒಳ್ಳೆಯದನ್ನು ಅರಿತುಕೊಳ್ಳುವಂತಹ ಶಕ್ತಿಯಲ್ಲಿಯೇ ಈ ಸಹಿಷ್ಣುತೆಯ ಮೂಲ ಅಡಗಿದೆ. ಹಿಂದೂ ಮುಸಲ್ಮಾನರು, ಕ್ರೈಸ್ತ-ಪಾರ್ಸಿಗಳು, ಬೌದ್ಧ-ಜೈನರು ಕೂಡ ಭಾರತೀಯ ಸಭ್ಯತೆಯನ್ನು ರೂಪುಗೊಳಿಸುವಲ್ಲಿ ಸಮಾನ ಪಾತ್ರವನ್ನು ವಹಿಸಿದ್ದಾರೆ.

ನಿಮ್ಮನ್ನು ಉದ್ಧರಿಸಬೇಕೆಂದಾಗಲೀ ಅಥವಾ ಸಂಘಟಿಸಬೇಕೆಂಬ ಉದ್ದೇಶದಿಂದಾಗಲೀ, ಒಂದು ಆಂದೋಲನ ಅಥವಾ ಸಂಸ್ಥೆಯ ಮುಖಂಡನಾಗಿಯಾಗಲೀ ನಾನಿಲ್ಲಿಗೆ ಬಂದಿಲ್ಲ. ಆದರೆ ನಮ್ಮ ಸಂಘದ ಉದ್ದೇಶವೇನೆಂದರೆ, ನಿಮ್ಮಲ್ಲಿ ಮೊದಲೇ ನಿಹಿತವಾಗಿರುವ ಅಗ್ನಿಯನ್ನು ಪ್ರಜ್ವಲಿಸುವುದೇ ಆಗಿದೆ. ದೈನಂದಿನ ಆಚರಣೆ ಹಾಗೂ ಸಮಿತಿಗಳ ಮೂಲಕ ನಿಮ್ಮ ಆಧ್ಯಾತ್ಮಿಕ ಆಗ್ರಹವನ್ನು ಕೇಂದ್ರೀಕೃತಗೊಳಿಸಿ ನಿಮ್ಮ ಸಹಕಾರದೊಂದಿಗೆ ಅವುಗಳನ್ನು ಪೂರ್ಣಗೊಳಿಸುವುದೇ ಆಗಿದೆ.

‘‘ಜಗತ್ತಿನ ಮುಕ್ತಿಯು, ಭಾರತದ ನವ ಅಭ್ಯುತ್ಥಾನವನ್ನವಲಂಬಿಸಿದೆ’’ ಎಂಬ ಸ್ವಾಮಿ ವಿವೇಕಾನಂದರ ನುಡಿಯು ಸಹಜವಾಗಿಯೇ ನಿಮ್ಮ ನೆನಪಿನಲ್ಲಿದ್ದೀತು. ಅವರ ಈ ಭವಿಷ್ಯದರ್ಶನವನ್ನು ರೂಪುಗೊಳಿಸಲೆಂದೇ ರಾಮಕೃಷ್ಣ ಮಠ ಹಾಗೂ ಮಿಷನ್ನನ್ನು ಅವರು ಸ್ಥಾಪಿಸಿದರು. ಸಂಘವು ತನ್ನನ್ನು ತೊಡಗಿಸಿಕೊಂಡಿರುವ ಕಾರ್ಯಚಟುವಟಿಕೆಗಳಿಂದ ಸ್ವಾಮೀಜಿಯವರು

ಕಂಡ ದಿವ್ಯದರ್ಶನವು ಬರಿಯ ಸ್ವಪ್ನವಲ್ಲ ಎಂದು ಪ್ರಮಾಣೀಕರಿಸಲ್ಪಟ್ಟಿದೆ. ಭಾರತದಲ್ಲಿ ಮಿಷನ್ನಿನಿಂದ ನಡೆಯುತ್ತಿರುವ ಸಾಧಾರಣ ಹಾಗೂ ವೃತ್ತಿಪರ ವಿದ್ಯಾಲಯಗಳು, ವಿದ್ಯಾರ್ಥಿ ಮಂದಿರಗಳು, ಅನಾಥಾಲಯಗಳು, ಗ್ರಂಥಾಲಯ-ಔಷಧಾಲಯಗಳು, ಆಸ್ಪತ್ರೆಗಳು ಅಲ್ಲದೆ ಸಮಾಜ ಸೇವಾ ಪ್ರಧಾನವಾದ ನೆರೆ-ದುರ್ಭಿಕ್ಷೆ-ಮಹಾಮಾರಿ ಪರಿಹಾರ ಶಿಬಿರಗಳು ಮತ್ತು ಭಾರತದ ಹೊರಗೆ ಉತ್ತರ ಮತ್ತು ದಕ್ಷಿಣ ಅಮೆರಿಕಾದ ಎರಡು ಕೇಂದ್ರಗಳು, ಯೂರೋಪು, ಸಿಂಗಾಪುರ, ಫಿಜಿ ಹಾಗೂ ಮಾರಿಷಸ್‌ನ ಮಿಷನ್ ಕೇಂದ್ರಗಳು ಮೇಲಿನ ಸತ್ಯವನ್ನು ಪ್ರತಿಪಾದಿಸುತ್ತವೆ. ವಿಭಿನ್ನ ಕೇಂದ್ರಗಳಲ್ಲಿ ನಡೆಯುವ ಪಾಠ-ಪ್ರವಚನಗಳು, ಮಿಷನ್ನಿನಿಂದ ಪ್ರಕಟಗೊಂಡ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಾಹಿತ್ಯದಿಂದಲೂ ಈ ವಿಷಯ ದೃಢವಾಗುತ್ತದೆ...

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಇಡೀ ಭಾರತಕ್ಕೆ ವಿಪತ್ತಿನ ಸಮಯ ಪ್ರಾಪ್ತವಾಯಿತು. ನಮ್ಮ ನಾಗರಿಕತೆಯು ಅಂದು ಗಾಢ ತಮಸ್ಸಿನಲ್ಲಿ ಮುಳುಗಿತ್ತು...ಅಸಂಖ್ಯಾತ ಮಾನವರನ್ನು ಸಾರಹೀನ ಕೃತ್ಯಗಳ, ಅರ್ಥಹೀನ ನಿಯಮಗಳ, ಕುಸಂಸ್ಕಾರಗಳ ಹಾಗೂ ಡಾಂಭಿಕರ ಬಲಿಪಶುಗಳನ್ನಾಗಿ ಮಾಡಿದ ಪ್ರಯುಕ್ತ ಭಾರತೀಯರ ಆಧ್ಯಾತ್ಮಿಕತೆಯು ಪರ್ವತಗುಹೆಗಳಲ್ಲಿ ಆಶ್ರಯವನ್ನು ಪಡೆಯಿತು. ಆಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಒಂದು ಹೊಸ ಬೆಳಕು, ಹೊಸ ಜೀವನ ಮೂಡಿ ಬಂತು; ಅದೇ ಉನ್ನತವೂ, ಶಕ್ತಿಶಾಲಿಯೂ ಆದ ಐರೋಪ್ಯ ನಾಗರಿಕತೆ. ಈ ನಾಗರಿಕತೆಯು ಮಾನವನ ವೈಚಾರಿಕ, ಬೌದ್ಧಿಕ, ಭಾವಿಕ ಶ್ರೇಷ್ಠತೆ, ಅಷ್ಟೆ ಏಕೆ ಮಾನವನ ಅನೇಕಾನೇಕ ಸಂಸ್ಕಾರಯುಕ್ತ ವ್ಯಕ್ತಿತ್ವದಲ್ಲೂ ಹೊಸ ಜಾಗೃತಿಯ ಛಾಪನ್ನು ಮೂಡಿಸಿತು. ಇದರ ಫಲವಾಗಿ ಆಪಾತಮುಕ್ತಿಯ ಆಕರ್ಷಣೆ ಮೂಡಿತು. ಅಂಧ ಕೂಪದಲ್ಲಿ ಮುಳುಗಿದ್ದ ಈ ದೇಶಕ್ಕೆ ಈ ನವ ಜಾಗೃತಿಯು ಅನೇಕರಿಗೆ ಅತೀ ವಾಂಛನೀಯವೆಂದೆನಿಸಿತು...

ಭಾರತದ ಸನಾತನ ಋಷಿಗಳು ಯಾವೊಂದು ಶಾಶ್ವತ ಸತ್ಯವನ್ನು ಕಂಡುಕೊಂಡಿದ್ದರೋ, ಅದನ್ನೇ ಶ್ರೀರಾಮಕೃಷ್ಣರು ತಮ್ಮ ಅನುಭವಗಳಿಂದ ಮತ್ತೆ ಬೆಳಕಿಗೆ ತಂದರು. ಸ್ವಾಮಿ ವಿವೇಕಾನಂದ, ಮತ್ತಿತರರಿಗೂ ಸಹ ಅದನ್ನೇ ಪರಮಗುರಿಯನ್ನಾಗಿ ಮಾಡಿಕೊಳ್ಳಲು ಆದೇಶವಿತ್ತರು. ಇಂದು ಪ್ರಾಚ್ಯದ ಮತ್ತು ಪಾಶ್ಚಾತ್ಯದ ಅನೇಕ ಚಿಂತನಶೀಲ ವ್ಯಕ್ತಿಗಳ ಅಭಿಪ್ರಾಯವೇನೆಂದರೆ, ಅಗ್ನಿಶಿಖೆಯು ಪತಂಗವನ್ನು ತನ್ನೆಡೆಗೆ ಆಕರ್ಷಿಸುವಂತೆ, ಐರೋಪ್ಯ ನಾಗರಿಕತೆಯೂ ಸಹ ನಮ್ಮನ್ನು ಅಂತೆಯೇ ಆಕರ್ಷಿಸಿ, ಕಣ್ಣು ಕೋರೈಸುವಂತೆ ಮಾಡುತ್ತದೆ ಎಂಬುದು. ಸುಖಕ್ಕಾಗಿಯೇ ಸುಖವನ್ನರಸುವ ಮನೋಭಾವವೆಂದಿಗೂ ಉನ್ನತ ಆದರ್ಶವನ್ನು ಎತ್ತಿಹಿಡಿಯಲು ಸಾಧ್ಯವಿಲ್ಲ ; ಅಲ್ಲದೆ ಲೌಕಿಕ ದೃಷ್ಟಿಕೋನದಿಂದ ನಾನೇ ಅತ್ಯಂತ ಶಕ್ತಿಶಾಲಿ ಹಾಗೂ ಮಹಾನ್ ಎಂಬ ಭ್ರಾಂತಿಯು ಅರ್ಥಹೀನವಾದದ್ದು, ಅಲ್ಲದೆ ಸಂಘರ್ಷವನ್ನೂ ನಿರಾಶೆಯನ್ನೂ ತಂದೊಡ್ಡುವಂತಹುದು. ಪ್ರಪಂಚದ ಒಳಹೊರಗಿರುವ ದೈವತ್ವದ ಬಗೆಗಿನ ಅನುರಾಗ ಮತ್ತು ಅನುಸರಣೆಗಳೇ ಮಾನವನನ್ನು ಅಂಧತೆ ಮತ್ತು ಅನುರಕ್ತತೆಯಿಂದ ಮುಕ್ತಗೊಳಿಸಬಲ್ಲದು...

ಬೇರೆ ಎಲ್ಲ ಮಹಾತ್ಮರೂ ಸಹ ಅದನ್ನೇ ಸಮರ್ಥಿಸಿದ್ದಾರೆ, 'ಭಾರತದ ಮಾರ್ಗವು ಯೂರೋಪ್ ಸಂಸ್ಕೃತಿಯ ಪಥವಲ್ಲ' ಎಂದು. ಐರೋಪ್ಯರ ಸಾಮರ್ಥ್ಯ, ಬುದ್ಧಿಯ ತೀಕ್ಷ್ಣತೆ, ಯೋಗ್ಯ ಆಡಳಿತ ಕ್ರಮ, ಸಾರ್ವಜನಿಕರಿಗೆ ಸೌಲಭ್ಯವನ್ನೊದಗಿಸುವ ಸಾಮರ್ಥ್ಯ, ಅದರ ಸಾಹಿತ್ಯ ಮತ್ತು ಕಲೆ ಇವುಗಳನ್ನೆಲ್ಲ ನಾವು ಪ್ರಶಂಸಿಸುತ್ತೇವೆ. ಆದರೆ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಬಲವು ಸಂವರ್ಧನೆಗೊಳ್ಳುತ್ತಲೇ ಅವಸರ-ಅವಿವೇಚನೆಯಿಂದ ಕೆಲಸ ಮಾಡಿಬಿಡುವ ಪ್ರವೃತ್ತಿಯೂ ಬೆಳೆದುಬಿಡುತ್ತದೆ. ತಾನು ಮಾಡಿದ ಕೆಲಸವು ತನ್ನನ್ನು ಎಲ್ಲಿಗೆ ಕರೆದೊಯ್ಯುತ್ತಿದೆ, ಅದರ ಉದ್ದೇಶವಾದರೂ ಏನು ಎಂದು ಪ್ರಶ್ನಿಸಿಕೊಳ್ಳುವ ಅವಕಾಶವನ್ನು ಆ ಬಲವು ಕ್ವಚಿತ್ತಾಗಿ ಪಡೆದೀತು. ಅನೇಕ ಚಿಂತನಶೀಲರು ಈ ಬಲದ ನಟನೆಯನ್ನು ಒಂದು ಆನಂದದಾಯಕ ನಾಟಕವೆಂಬಂತೆ ನೋಡಬಲ್ಲರು. ಅದನ್ನೇ ಜೀವನದೊಂದು ಗುರಿಯೆಂದೆಣಿಸಿ ನಿಸ್ಸಂದೇಹವಾಗಿ ಅದಕ್ಕೆ ಸನ್ಮಾನವನ್ನೂ ತೋರಬಲ್ಲರು; ನಾಟಕದಲ್ಲೇನಾದರೂ ದುಃಖ-ಯಾತನೆಗಳ ಮಿಶ್ರಣವಿದ್ದೊಡೆ, ಅವರ ಪ್ರಕಾರ ಆ ನಾಟಕವು ಸಮೃದ್ಧ ಹಾಗೂ ಉಚ್ಚಮಟ್ಟದ್ದು. ಆದರೆ ಭಾರತೀಯ ದರ್ಶನ ಮತ್ತು ಆಧ್ಯಾತ್ಮಿಕ ಚಿಂತನೆಗಳ ಉದ್ದೇಶವಾದರೋ ಈ ರೀತಿಯ ಭಾವ ಸಂಮಿಶ್ರಣಗಳಿಂದ ಪಾರಾಗುವುದೇ ಆಗಿದೆ....

ಬುದ್ಧಿಜೀವಿಗಳಿಗೆ ಐರೋಪ್ಯರ ಜೀವನಾದರ್ಶಗಳು ಅತೃಪ್ತಿಕರ ಮತ್ತು ದೋಷಯುಕ್ತ ಎಂಬುದು ಖಚಿತವಾಗಿ ವೇದ್ಯವಾಗಿರುತ್ತದೆ. ಅಷ್ಟೇ ಅಲ್ಲ, ಅದರ ಪರಿಣಾಮ ಯುದ್ಧವೇ! ಇದು ಅನಿವಾರ್ಯ ಎಂಬುದೂ ಸಹ ಚಿಂತನಶೀಲರಿಗೆ ಗೊತ್ತಿದೆ. ಈ ವಿಷಮ ಪರಿಸ್ಥಿತಿಯು ಎಷ್ಟು ಕೈಮೀರಿ ಹೋಗಿದೆಯೆಂದರೆ ಯುದ್ಧಕ್ಕೆ ಪರ್ಯಾಯವಾಗಿ ಏನನ್ನೂ ಯೋಚಿಸಲು ಸಾಧ್ಯವಾಗುತ್ತಲೇ ಇಲ್ಲ.''

ಮುಂಬೈನ ಸನ್ಮಾನ್ಯ ಮೇಯರ್ ಸಹ ತಮ್ಮ ಭಾಷಣದಲ್ಲಿ ಯುದ್ಧದ ಬಗ್ಗೆ ಅನೇಕ ಮಾತುಗಳನ್ನಾಡಿದರು: ''ಈ ಯುದ್ಧದ ಪರಿಸ್ಥಿತಿಯು — ಯುದ್ಧದ ಹಿಂದಡಗಿರುವ ತತ್ತ್ವವಾದರೂ ಏನು? ಇದರಿಂದ ನಮಗಾಗಿರುವ ಲಾಭ-ನಷ್ಟವಾದರೂ ಎಷ್ಟು? ಇದಕ್ಕೆ ಉತ್ತಮವಾದ ಸುಧಾರಣೆಯನ್ನು ಯಾವುದು ನೀಡಬಲ್ಲದು? ಎಂದು ಆಳವಾಗಿ ಯೋಚಿಸುವಂತೆ ಮಾಡಲಾರದೇನು?... — ನಮ್ಮ ಮನದಲ್ಲೇನಾದರೂ ಸತ್ಯದ ಬಗ್ಗೆ ಜಿಜ್ಞಾಸೆಯಿದ್ದಿದ್ದೇ ಆದರೆ, ಜೀವನದ ನಿಜವಾದ ತಾತ್ಪರ್ಯವಾದರೂ ಏನು? ಎಂಬ ಪ್ರಶ್ನೆ ಜಾಗೃತವಾಗಿದ್ದೇ ಆದರೆ, ಯುದ್ಧವು ಬಹುಮುಖ್ಯವಾದ ಕೆಲಸವನ್ನೇ ಮಾಡಿದೆ ಎಂದು

ಹೇಳಬೇಕಾಗುತ್ತದೆ. ಯುದ್ಧವು ಕೆಲವರ ಮನದಲ್ಲಿ ಪ್ರಸ್ತುತ ಜೀವನದ ಬಗ್ಗೆ ಜುಗುಪ್ಸೆಯನ್ನು ತಂದಿರಬಹುದು. ಈ ರೀತಿಯ ಜಿಜ್ಞಾಸೆ ಮತ್ತು ಪರಮ ಅತೃಪ್ತ ಭಾವದಿಂದಲೇ ಮನುಷ್ಯನು ಚರಮ ಅನುಭೂತಿಯ ಪಥದಲ್ಲಿ ಮುನ್ನಡೆಯುತ್ತಾನೆ. ಭಗವದ್ ವ್ಯಾಕುಲತೆಯೊಡನೆ ಹೊಸದೊಂದು ಪಥವನ್ನು ಅಂತಿಮವಾಗಿ ಸ್ವೀಕರಿಸಿದ್ದೇ ಆದರೆ, ಯೂರೋಪಿನ ಯುದ್ಧದ ಮೂಲದಲ್ಲಿ ಯಾವೊಂದು ತತ್ತ್ವವಿದೆಯೋ, ತ್ರಾಸ-ದುಃಖ- ನಿರಾಶೆಯು ಯಾವುದರ ಅನಿವಾರ್ಯ ಪರಿಣಾಮವೋ ಅದರ ಕೈಯಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಹುಡುಕಿದಂತಾಗುತ್ತದೆ...

''ನಮ್ಮ ಆದರ್ಶದಲ್ಲಿರುವ ಸತ್ಯವನ್ನು ಅನುಭವಕ್ಕೆ ತಂದುಕೊಂಡಿರುವವರಿಗೆ ನಾನು ಹೇಳಬಯಸುವುದೇನೆಂದರೆ, ಸ್ವಾಮಿ ವಿವೇಕಾನಂದರ ಭವಿಷ್ಯದರ್ಶನ ಮತ್ತು ಮಾರ್ಗದರ್ಶನದಂತೆ ಮಾನವ ಸೇವೆಯೆ ನಮ್ಮೆಲ್ಲರ ಪ್ರಯತ್ನವಾಗಿರಲಿ; ಆ ಗುರಿಯನ್ನಿಟ್ಟುಕೊಂಡು ನವ ಭಾರತವನ್ನು ಕಟ್ಟಲು ಹೊರಟಿರುವ ನಾವುಗಳು ನಮ್ಮೆಲ್ಲ ಪ್ರಯತ್ನಗಳನ್ನು ಆ ದಿಕ್ಕಿನಲ್ಲೇ ಮುನ್ನಡೆಸುವಂತಾಗಲಿ, ಅದರ ಫಲವಾಗಿ ಹೊಸ ಜಗತ್ತೇ ಸೃಷ್ಟಿಯಾಗಲಿ. ಹಿಂದೆ ನಮ್ಮ ಮಿಷನ್ನಿನ ಪ್ರಗತಿಯು ಶೀಘ್ರಗತಿಯುಳ್ಳದ್ದೂ, ವಿಸ್ಮಯವನ್ನುಂಟುಮಾಡುವಂತೆಯೂ ಇದ್ದರೂ ಸಹ, ಪ್ರಸ್ತುತ ನಮ್ಮೆದುರಿಗಿರುವ ಅಗಾಧವಾದ ಕೆಲಸವನ್ನು ಊಹಿಸಿಕೊಂಡರೆ ಹಿಂದಿನ ಉನ್ನತಿಯು ಅತಿ ನಗಣ್ಯವೇ. ನಮಗೀಗ ಬೇಕಾಗಿರುವುದು ಆಶಾಕಿರಣ ಮತ್ತು ವಿಶ್ವಾಸ, ಮನುಷ್ಯಬಲ ಮತ್ತು ಧನಬಲ, ಸಹಾನುಭೂತಿಯೊಂದಿಗೆ ಕಾರ್ಯತತ್ಪರತೆ, ಏಕಾಗ್ರಭಕ್ತಿ ಮತ್ತು ದೂರದೃಷ್ಟಿ ಜನಿತ ಮಾರ್ಗದರ್ಶನ. ಇವುಗಳನ್ನು ದಯಪಾಲಿಸಲೆಂದು ಭಗವಂತನಲ್ಲಿ ಮೊರೆಯಿಡುತ್ತೇನೆ. ಆತನು ನಾವಿಟ್ಟ ತಪ್ಪು ಹೆಜ್ಜೆಗಳನ್ನು ತಿದ್ದಿ ಸರಿಮಾರ್ಗದಲ್ಲಿ ನಡೆಸಲಿ, ಸತ್ಯದೃಷ್ಟಿಯನ್ನೀಯಲಿ. ಅಲ್ಲದೆ ಎಲ್ಲ ಧರ್ಮಸಮೂಹದ ಆದಿಜನನಿಯಾದ ನಮ್ಮ ಈ ಸನಾತನ ಮಾತೃಭೂಮಿಯ ಸಭ್ಯತೆಗೂ ಮತ್ತು ಅದರ ಸುದೀರ್ಘ ಐತಿಹ್ಯಕ್ಕೂ ಪ್ರಾಣಶಕ್ತಿಯನ್ನು ನೀಡಿ ಕೊನೆಯವರೆಗೂ ರಕ್ಷಿಸಲಿ. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಮಹಾನ್ ಆದರ್ಶವನ್ನು ಅನುಭವಕ್ಕೆ ತಂದುಕೊಳ್ಳಲು ಹೊರಟಿರುವ ನಮ್ಮ ಸಂಘವನ್ನು ಸರ್ವಶಕ್ತನಾದ ಭಗವಂತನು ಸದಾ ಪವಿತ್ರವಾಗಿಟ್ಟಿರಲಿ.''

* * *

ಪುಣೆಯ ಮಿ. ಸಿ. ಡಿ. ಡ್ಯಾಡಿ ಎಂಬುವರು ಶ್ರೀರಾಮಕೃಷ್ಣ ಮಠದ ವಿಶೇಷ ಪಾರ್ಸಿ ಮಿತ್ರರು. ಇವರು ವಿರಜಾನಂದರನ್ನು ಪುಣೆಗೆ ಬಂದು ಕೆಲವೊಂದು ದಿನ ವಿಶ್ರಾಂತಿಯನ್ನು ಪಡೆಯುವಂತೆ ವಿನಂತಿಸಿಕೊಂಡರು. ಶ್ಯಾಮಲಾತಾಲಿನಿಂದ ಹೊರಟು ಬಂದ ಮೇಲೆ ವಿರಜಾನಂದರು ದರ್ಶನ ಹಾಗೂ ದೀಕ್ಷೆ ನೀಡುವುದರಲ್ಲೇ ನಿರತರಾದ್ದರಿಂದ ಬಳಲಿದ್ದರು. ಮಿ. ಡ್ಯಾಡಿಯ ಪ್ರಸ್ತಾಪವು ಸ್ವಾಗತಾರ್ಹವೆಂದೆನಿಸಿತು. ೨೯ನೇ ನವೆಂಬರ್ ೧೯೩೩ರಂದು ವಿರಜಾನಂದರು, ಮುಂಬೈ ಆಶ್ರಮಾಧ್ಯಕ್ಷರಾದ ಸಂಬುದ್ಧಾನಂದರು ಮತಿಬ್ಬರು ಸೇವಕರೊಂದಿಗೆ ಪುಣೆಗೆ ಹೊರಟರು. ಮಿ. ಡ್ಯಾಡಿಯವರು ವಿರಜಾನಂದರಿಗೆ ಪುಣೆಯಲ್ಲಿ ಸಭೆ ಮುಂತಾದವುಗಳನ್ನು ಏರ್ಪಡಿಸಿ ಯಾವುದೇ ಉಪಟಳವನ್ನು ನೀಡುವುದಿಲ್ಲವೆಂದು ಭರವಸೆಯನ್ನಿತ್ತಿದ್ದರಲ್ಲದೆ ತಾವೇ ಸ್ವಯಂ ಅದರ ಬಗ್ಗೆ ಒಂದು ಕಣ್ಣಿಡುವುದಾಗಿ ತಿಳಿಸಿದ್ದರು. ಅದರಂತೆಯೇ ಅವರು ಪುಣೆಗೆ ಮಹಾರಾಜರು ಬರುವ ವಿಷಯವನ್ನು ಪ್ರಚಾರಗೊಳಿಸದೆ ಕೆಲವೇ ಕೆಲವು ಭಕ್ತರೊಂದಿಗೆ ವಿರಜಾನಂದರನ್ನು ಸ್ವಾಗತಿಸಲು ರೈಲ್ವೆ ಸ್ಟೇಷನ್ನಿಗೆ ಸಂಜೆ ಹೋದರು. ಆದರೆ ರೈಲು ನಿಲ್ದಾಣ ತಲುಪುತ್ತಿದ್ದಂತೆಯೇ ನೋಡಿದ್ದೇನು? ಪುಷ್ಪಮಾಲೆಗಳ ಸಮೇತ ಬಂದಿದ್ದಂತಹ ಒಂದು ದೊಡ್ಡ ಗುಂಪು! ಇವರೆಲ್ಲ 'ದಕ್ಷಿಣ ಭಾರತದ ಯುವಕ ಸಂಘ' ದವರು. ಅವರುಗಳು, ''ಸ್ವಾಮೀಜಿ, ಮಿ. ಡ್ಯಾಡಿಯವರ ಮನೆಗೆ ಹೋಗುವಾಗ ದಾರಿಯಲ್ಲಿ ನಮ್ಮ ಸಮಿತಿಗೂ ನಿಮ್ಮ ಪದಾರ್ಪಣೆಯಾಗಲಿ, ದಯಮಾಡಿಸಿ'' ಎಂದರು. ಮಹಾರಾಜರು ಮಿ. ಡ್ಯಾಡಿಯವರನ್ನು, ''ಏನಯ್ಯಾ, ನನ್ನನ್ನು ಇಲ್ಲಿ ಯಾರೂ ಬಾಧಿಸುವುದಿಲ್ಲವೆಂದೆ; ಇವರೆಲ್ಲ ಎಲ್ಲಿಂದ ಬಂದರು?'' ಎಂದು ಪ್ರಶ್ನಿಸುವಂತೆ ನೋಡಿದರು. ಡ್ಯಾಡಿಯವರೂ ಗಾಬರಿಗೊಂಡು, ''ಮಹಾಸ್ವಾಮಿ ನನಗೆ ತಾನೇ ಇದೆಲ್ಲ ಏನು ಗೊತ್ತು?'' ಎಂಬಂತೆ ಪಿಳಿಪಿಳಿ ಕಣ್ಣುಬಿಟ್ಟರು.

ಸರಿ, ಪದಾರ್ಪಣೆಯಾಯಿತು. ಅಷ್ಟೇ ಅಲ್ಲ , ಸುಮಾರು ಇನ್ನೂರು ಜನರ ಸಭೆಯೇ ನೆರೆದಿತ್ತು. ಮಿ. ಡ್ಯಾಡಿಯವರ ಎಚ್ಚರಿಕೆಯ ಕಣ್ಣನ್ನೂ ಸಹ ತಪ್ಪಿಸಿ ಈ ಯುವಕರು ಮಹಾರಾಜರು ಪುಣೆಗೆ ಬರುವ ಸುದ್ದಿಯನ್ನು ಸಂಗ್ರಹಿಸಿಯೇ ಬಿಟ್ಟಿದ್ದರು. ಅವರಿಗೆ ಸ್ವಾಗತ ಕೋರಿ, ಅವರ ಮಾತುಗಳನ್ನಾಲಿಸುವ ನಿರೀಕ್ಷೆಯಿಂದ ದೊಡ್ಡ ಸಭೆಯ ಆಯೋಜನೆಯನ್ನೇ ಮಾಡಿಬಿಟ್ಟಿದ್ದರು. ಯುವಕರಿಂದ ಅಭಿನಂದನಾಪತ್ರವು ಓದಲ್ಪಟ್ಟಿತು. ವಿರಜಾನಂದರಿಗಾದರೋ ಬೇರೆ ದಾರಿ ಕಾಣದಾಯಿತು. ಅವರು ಆಗ ಅದೆಷ್ಟು ಬಳಲಿದ್ದರೆಂದರೆ ಯಾವುದೇ ಭಾಷಣವನ್ನಾಗಲಿ, ಆಧ್ಯಾತ್ಮಿಕ ವಿಷಯವನ್ನಾಗಲಿ ಚರ್ಚಿಸುವುದಕ್ಕೆ ಸಂಪೂರ್ಣವಾಗಿ ಅಶಕ್ತರಾಗಿದ್ದರು. ಆದರೆ ಈ ಯುವಕ ಸಂಘದವರು ಬಿಡುವವರಲ್ಲ. ''ಹಾಗಾದರೆ ದಯವಿಟ್ಟು ಹೇಳಿ, ನಿಮಗೆ ಅನುಕೂಲವಾದಂದು ನಮಗೆ ಏನಾದರೂ ಹೇಳುವಿರಲ್ಲವೆ?'' ಎಂದು ಒತ್ತಾಯಿಸಿದರು.

ಒಪ್ಪಿಕೊಳ್ಳದೆ ಮತ್ತೇನು ತಾನೇ ಮಾಡಿಯಾರು? ಮತ್ತೊಂದು ದಿನ ಸ್ವಾಮೀಜಿಯವರ ಸಾನ್ನಿಧ್ಯದೊಂದಿಗಿನ ನೆನಪುಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದೆಂದು ತೀರ್ಮಾನವಾಯಿತು. ಆದ್ದರಿಂದ ಆ ದಿನ ಸದ್ಯಕ್ಕೆ ಎದ್ದು ನಿಂತು ಐದು ನಿಮಿಷಗಳ ಕಾಲ ಎಲ್ಲರನ್ನೂ ಉದ್ದೇಶಿಸಿ ಧನ್ಯವಾದಗಳನ್ನರ್ಪಿಸಿ, ಆಶೀರ್ವದಿಸಿ, ಆ ಉತ್ಸಾಹೀ ಯುವಕರಿಂದ ಬೀಳ್ಕೊಂಡರು.

*(ಮುಂದುವರಿಯುವುದು)*